ಸುಧಾರಿಸಿತ್ತು. ಮಕ್ಕಳನ್ನ ನೋಡಿಕೊಳ್ಳಲು ಒಬ್ಬ ಆಳಿದ್ದಳು. ಅವಳು ಮಕ್ಕಳನ್ನೂ, ಜೊತೆಗೆ ಗಂಡನನ್ನೂ ನೋಡಿಕೊಳ್ತಿದ್ದಳು. ಇನ್ನು ಒಬ್ಬ ಮನುಷ್ಯನಿಗೆ ಊಟ, ಬಟ್ಟೆ, ವಸತಿ, ಹಣ, ಶ್ರೀಮಂತಿಕೆ... ಮ್... ಮತ್ತು ಅಗಾಧ ಸ್ವಾತಂತ್ರ್ಯ ಇಷ್ಟೂ ಮುಫತ್ತಾಗಿ ಸಿಗುತ್ತೆ ಅಂದಮೇಲೆ ಬಹುಶಃ ಅವನಿಗೆ ಅಷ್ಟೇ ಸಾಕೆನಿಸಿರಬೇಕೋ ಏನೋ. ಅಷ್ಟಕ್ಕೂ ಸರ್, ಅವರು ಒಂದೇ ಒಂದು ದಿನವಾಗಲೀ ಕೈ ಕೈ ಹಿಡಕೊಂಡು ಕೂತಿದ್ದನ್ನ ಯಾರೂ ಕಂಡಿಲ್ಲ. ಅವನು ಯಾವೊತ್ತೂ ಅವಳ ಮನೆಗೆ ಬಂದಿಲ್ಲ. ಆಫೀಸಿನಿಂದ ಒಂದು ದಿನವೂ ತಡವಾಗಿ ಬಂದಿಲ್ಲ. ರಜೆ ಹಾಕಿ ಎಲ್ಲಾದರೂ ಹೋಗುತ್ತಿದ್ದರಾ ಅದೂ ಗೊತ್ತಿಲ್ಲ. ಅದಕ್ಕೆ ಯಾವ ಸಾಕ್ಷಿಯೂ ಇಲ್ಲ. ಇನ್ನು ಅವಳಾದರೂ ತನ್ನ ಗಂಡನ ಯಾವ ಸುಖದುಃಖವನ್ನೂ ಕಡೆಗಣಿಸಿದವಳಲ್ಲ. ಅದೂ ಅಲ್ಲದೆ ಸರ್, ಅವರಿಬ್ಬರೂ ಒಳ್ಳೆಯ ಗೆಳೆಯರಷ್ಟೇ ಆಗಿದ್ದಾರೆಂದು ತಿಳಿದುಕೊಳ್ಳುವುದು ಅಥವಾ ಹಾಗೆ ನಂಬುವುದು ಎಲ್ಲರಿಗೂ ಒಳ್ಳೆಯದು ಅಂತ ಅವನಿಗೆ ಅನಿಸಿರಬೇಕಲ್ವಾ ಸರ್?' ಅವನ ಅಭಿಪ್ರಾಯವನ್ನು ನಾನು ಹೇಗಾದರೂ ಒಪ್ಪಲಿ ಎಂಬಂತೆ ಅವನು ಅನುನಯಿಸಿ ಮತಾಡುತ್ತಿದ್ದ. 'ಸರೀ ಇಷ್ಟೆಲ್ಲ ಹೇಳ್ತೀರಲ್ಲ, ನೀವು ಯಾರು? ಈ ಕತೆಯಲ್ಲಿ ನಿಮ್ಮ ಪಾತ್ರ ಏನು?' ನನಗೆ ತಡೆಯದೆ ಕೇಳಿದೆ. ಅವನು ಇದಕ್ಕೂ ಉತ್ತರಿಸದೆ ಸಣ್ಣಗೆ ನಕ್ಕ. ನನಗೆ ಸಣ್ಣಗೆ ಸಿಟ್ಟು ಬಂತು. 'ಸರಿ ನಾನು ಹೊರಡ್ತೇನೆ, ಇಷ್ಟೇ ತಾನೇ ಕತೆ?' ನಾನು ಏಳುವ ಅವಸರ ತೋರಿದೆ ಅಥವಾ ಎದ್ದೆ. 'ಸ್ಸಾರಿ ಸರ್, ಬಹುಶಃ ನಾನು ಅನಗತ್ಯವಾಗಿ ಮಾತಾಡ್ತಿದಿನೇನೋ ಅನಿಸ್ತಾ ಇದೆ. ಇದೋ ಮುಗಿಸ್ದೆ. ಮುಂದೆ ಕೇಳಿ. ಇದು ಹೀಗೇ ಯಾರ ಅಡೆ ತಡೆ ಇಲ್ಲದೆ, ಯಾವ ಸಮಸ್ಯೆ ಇಲ್ಲದೆ ವರ್ಷ ವರ್ಷ ದಾಟಿ ಮುನ್ನಡೀತು ಸರ್. ಅವರು ಒಂದು ದಿನ ಜಗಳಾಡಲಿಲ್ಲ, ಮಾತು ಬಿಡಲಿಲ್ಲ, ಸುಮ್ಮನೆ ಇರುತ್ತಿದ್ದಾರೇನೋ ಅನಿಸುತ್ತಿತ್ತಾದರೂ ಬದುಕಿನ ಬಹಳಷ್ಟು ಸಮಯವನ್ನವರು ಒಟ್ಟಿಗೇ ಕಳೆದರು ಅನ್ನಬಹುದು. ಎಷ್ಟರ ಮಟ್ಟಿಗೆಂದರೆ ಅವನು ರಿಟೈರ್ ಆದಾಗ ಈಕೆ ವಾಲಂಟರಿ ರಿಟೈರ್ಮೆಂಟ್ ತಗೊಂಡು ಬಿಟ್ಟಳು. ಬಹುಶಃ ಒಂದು ದಿನ ಕೂಡ ಅವನಿಲ್ಲದೆ ಕೆಲಸಕ್ಕೆ ಹೋಗಲಿಲ್ವೇನೋ. ಅಂತೂ ಇಷ್ಟಾಯಿತು. ಅದಾದಮೇಲೆ ಅವರು ಒಬ್ಬರನೊಬ್ಬರು ಎಲ್ಲೂ ಭೇಟಿಯಾಗಲಿಲ್ಲ. ಆಫೀಸಿಗಂತೂ ಹೋಗುವಂತಿರಲಿಲ್ಲವಲ್ಲ... ಇನ್ನು ಒಬ್ಬರ ಮನೆಗೊಬ್ಬರೂ ಯಾವತ್ತೂ ಹೊದವರಲ್ಲ. ಆಮೇಲೆಯೂ ಅವರು ಯಾವತ್ತೂ ಒಬ್ಬರೊಬ್ಬರ ಮನೆಗೆ ಹೋಗಲಿಲ್ಲ... ತೀರ ಅವನ ಹೆಂಡತಿ ಬಾವಿಗೆ ಬಿದ್ದು ಸಾಯುವ ತನಕ! ಗಾಬರಿಯಾದಿರಾ? ಅವನು ನಕ್ಕ. ಅದೊಂದು ವಿಷಾದದ ಸಂಗತಿ ಸರ್. ಎಲ್ಲ ಗಂಡಹೆಂಡತಿಯರಂತೆ ಅವರೂ ಆಗೀಗ ಜಗಳಾಡುತ್ತಿದ್ದದು ನಿಜ. ಗಂಡಹೆಂಡತಿ ಅಂದಮೇಲೆ ಅಷ್ಟೆಲ್ಲ ಇರುತ್ತೆ ಅನ್ನಿ. ಇದರಲ್ಲಿ ಒಂದು ತಮಾಷೆಯೆಂದರೆ, ಪ್ರತೀ ಜಗಳದ ಬಳಿಕ ಅವನು ಕೋವಿಯೆತ್ತಿಕೊಂಡು ಗುಂಡು ಹೊಡಕೊಂಡು ಸಾಯ್ತೀನಿ ನೋಡು ಅನ್ನುತ್ತ ಹೊರಗೆ ಹೋಗುವುದು ಮತ್ತು ಹೋದ ಅರ್ಧ ಗಂಟೆಯಲ್ಲಿ ಏನೂ ನಡೆಯದಂತೆ ಸೌಮ್ಯವಾಗಿ ಬಂದು ಮನೆ ಸೇರುವುದು, ಅವನ ಹೆಂಡತಿಯೂ ಅಷ್ಟೇ ಸರಾಗವಾಗಿ ದಿನದ ಬದುಕಿನೊಳಗೆ ಮುಳುಗಿಹೋಗುವುದು, ಮಕ್ಕಳು ತಮಾಷೆಗೆಂಬಂತೆ ಅವನನ್ನು ಗೇಲಿ ಮಾಡುವುದು ಒಂದು ಕಾಯಂ ಅಂಕವಾಗಿತ್ತು. ಅಂಥದೊಂದು ದಿನ ಎಂದಿನಂತೇ ಜಗಳವಾಗಿದೆ– ಅದು ಅವನ ಮಗಳ ಮದುವೆ ವಿಷಯದಲ್ಲಿ. ಹೆಂಡತಿ ಮಗಳ ಮದುವೆಯನ್ನು ಜೋರಾಗಿ ಮಾಡಬೇಕೆಂದು ಹೇಳಿದ್ದಾಳೆ. ಅದಕ್ಕವನು ಅದೇನೂ ಬೇಡ, ಮದುವೆಯ ಖರ್ಚು–ವೆಚ್ಚವನ್ನು ಒಂಚೂರು ಹಿಡಿದೇ ಮಾಡಬೇಕು ಅಂದಿದ್ದಾನೆ. ಒಡನೇ ಇವಳು 'ಹೌದೌದು ಇರಬೇಕಾದ್ದೇ... ಇನ್ನೂ ಎರಡು ಹುಡುಗಿಯರ ಮದುವೆ ಮಾಡಲಿಕ್ಕಿದೆಯಲ್ಲ, ಅದಕ್ಕೂ